ನಿವೃತ್ತಿ ಸೌಲಭ್ಯವನ್ನು ಪಾವತಿ ಮಾಡುವುದು ತುಂಬಾ ಕಷ್ಟಕರವಾಗಿದೆ. ಇಂತಹ ಆರ್ಥಿಕ ಕಠಿಣ ಪರಿಸ್ಥಿತಿಯಲ್ಲಿ ತಿಂಗಳಿಗೆ ರೂ.1.00 ಕೋಟಿಯಂತೆ ನಿವೃತ್ತಿ ಸೌಲಭ್ಯಗಳನ್ನು ಪಾವತಿ ಮಾಡುವ ಯೋಜನೆಯನ್ನು ಜಾರಿಗೊಳಿಸ ಲಾಗಿದೆ. ಮುಂದುವರೆದು ಸಂಸ್ಥೆಯ ಹಣಕಾಸಿನ ಪರಿಸ್ಥಿತಿ ಸುಧಾರಿಸಿದಲ್ಲಿ ಸಿಬ್ಬಂದಿಗಳ ನಿವೃತ್ತಿ ಸೌಲಭ್ಯಗಳನ್ನು ಪ್ರಥಮ ಆದ್ಯತೆಯ ಮೇರೆಗೆ ಪಾವತಿಸಲು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ.

ಹೊಸದಾಗಿ ನೇಮಕಗೊಂಡ ಚಾಲಕ–ಕಂ–ನಿರ್ವಾಹಕರ ವೇತನ

375 (741) ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ಹೊಸದಾಗಿ ನೇಮಕಾತಿ ಮಾಡಿಕೊಳ್ಳಲಾದ ಚಾಲಕ/ಚಾಲಕ ಕಂ ನಿರ್ವಾಹಕ ಇವರುಗಳಿಗೆ ಮಾಹೆಯಾನ ನೀಡುತ್ತಿರುವ ವೇತನವೆಷ್ಟು; ಯಾವ ಆಧಾರದ ಮೇಲೆ ಈ ವೇತನವನ್ನು ನಿಗದಿಪಡಿಸಲಾಗಿದೆ;

ಆ) ಈಗ ನೀಡಲಾಗುತ್ತಿರುವ ವೇತನವು ಖಾಸಗಿ ಸಂಸ್ಥೆಗಳು ನೀಡುತ್ತಿರುವ ವೇತನಕ್ಕಿಂತ ಕಮ್ಮಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈಗ ನೀಡುತ್ತಿರುವ ವೇತನದಿಂದ ಚಾಲಕ ಚಾಲಕ ಕಂ ನಿರ್ವಾಹಕ ಇವರುಗಳು ಸಂಸಾರ ನಿರ್ವಹಿಸುವುದು ಯಾವ ರೀತಿ ಸಾಧ್ಯ; ಇವರುಗಳ ವೇತನವನ್ನು ಹೆಚ್ಚಿಸಲು ಸರ್ಕಾರವು ಯಾವ ಕ್ರಮ ತೆಗೆದುಕೊಂಡಿದೆ?

ಶ್ರೀ ಆರ್. ಅಶೋಕ (ಸಾರಿಗೆ ಸಚಿವರು) :

ಅ) ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹೊಸದಾಗಿ ನೇಮಕಗೊಂಡ ಚಾಲಕರಿಗೆ ಮೊದಲನೆ ವರ್ಷ ರೂ.2800/– ಮತ್ತು 2 ನೇ ವರ್ಷ ರೂ.3,300/–ಹಾಗೂ ಚಾಲಕ ಕಂ ನಿರ್ವಾಹಕರಿಗೆ ಮೊದಲನೆ ವರ್ಷ ರೂ.2,500/– 2ನೇ ವರ್ಷ ರೂ.300/– ತರಬೇತಿ ಭತ್ಯೆ ನೀಡಲಾಗುತ್ತಿದೆ.

ಇದರ ಜೊತೆಗೆ ಈ ಕೆಳಕಾಣಿಸಿದ ಸೌಲಭ್ಯಗಳನ್ನು ನೀಡಲಾಗುತ್ತಿದೆ;

1. ತಿಂಗಳಲ್ಲಿ 22 ದಿನ ಕರ್ತವ್ಯ ನಿರ್ವಹಿಸಿದಲ್ಲಿ ಮಾಸಿಕ ರೂ.500/– ಹಾಜರಾತಿ ಪ್ರೋತ್ಸಾಹದನವಾಗಿ ನೀಡಲಾಗುತ್ತಿದೆ.
2. ಬೆಂಗಳೂರು ಹಾಗೂ ಮಂಗಳೂರು ಕೇಂದ್ರ ಸ್ಥಾನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ತರಬೇತಿ ನೌಕರರಿಗೆ ಮಾಸಿಕ ರೂ.500/– ಪರಿಶ್ರಮ ಭತ್ಯೆಯನ್ನು ನೀಡಲಾಗುತ್ತಿದೆ.
3. ಚಾಲಕ ಕಂ ನಿರ್ವಾಹಕ ಹುದ್ದೆಯ ಅಭ್ಯರ್ಥಿಗಳು ಎರಡೂ ಹುದ್ದೆಗಳಲ್ಲಿ ಒಟ್ಟಿಗೆ ಕರ್ತವ್ಯ ನಿರ್ವಹಿಸಿದಲ್ಲಿ ಒಂದು ಕರ್ತವ್ಯಕ್ಕೆ ರೂ.75/– ಪ್ರೋತ್ಸಾಹ ದನವನ್ನು ನೀಡಲಾಗುತ್ತಿದೆ.
4. ಕರ್ತವ್ಯ ನಿರ್ವಹಿಸಿ ಸಂದಾಯವಾದ ಒಟ್ಟು ಸಾರಿಗೆ ಆದಾಯದ ಶೇಕಡ 2 ರ ಮೊತ್ತವನ್ನು ಪ್ರೋತ್ಸಾಹ ದನವಾಗಿ ನೀಡಲಾಗುತ್ತಿದೆ.
5. ಸಮವಸ್ತ್ರ/ರೈನ್‌ಕೋಟ್/ಜರ್ಸಿ ವಿತರಿಸಲಾಗುತ್ತಿದ್ದು ಜೊತೆಗೆ ಹೊಲಿಗೆ ಖರ್ಚು ಹಾಗೂ ವಾಷಿಂಗ್ ಭತ್ಯೆಯನ್ನು ನೀಡಲಾಗುತ್ತಿದೆ.

ಈ ತರಭೇತಿ ಭತ್ಯೆಯನ್ನು ಮಂಡಳಿ ಅನುಮೋದನೆಯಂತೆ ನಿಗದಿ ಪಡಿಸಲಾಗಿದೆ.

ಆ) ಖಾಸಗಿ ಸಂಸ್ಥೆಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹೆಚ್ಚು ಸೌಲಭ್ಯಗಳನ್ನು ನೀಡಲಾಗುತ್ತಿರುತ್ತದೆ. ಇದರಿಂದ ತರಬೇತಿ ನೌಕರರಿಗೆ ಜೀವನವನ್ನು ನಡೆಸಲು ಯಾವುದೇ ರೀತಿಯ ಹೊರೆಯಾಗುವುದಿಲ್ಲ.

ಇ) ಖಾಸಗಿ ಸಂಸ್ಥೆಗಳಿಗೆ ಹೋಲಿಸಿದಾಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಹೆಚ್ಚು ಸೌಲಭ್ಯಗಳನ್ನು ನೀಡಲಾಗುತ್ತಿದೆ. ಇದರಿಂದ ತರಬೇತಿ ನೌಕರರಿಗೆ ಜೀವನವನ್ನು ನಡೆಸಲು ಯಾವುದೇ ರೀತಿಯ ಹೊರೆಯಾಗುವುದಿಲ್ಲ.

ಅಂಗನವಾಡಿ ಹಾಗೂ ಉಪ ಅಂಗನವಾಡಿ ಕೇಂದ್ರಗಳನ್ನು ಮಂಜೂರು ಮಾಡುವುದು

376 (380) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣ ಶೆಟ್ಟಿ : ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?